
# ಅಜ್ಜನ ಸಲಹೆ



**■ ಶಾಲಿನಿ ನಾಯಕ್**

ಕಲೆ: ಸಂತೋಷ್ ಸಸಿಹಿತ್ಲು

ಆಕಾಶ್ ಪ್ರಾಥಮಿಕ ಶಾಲೆಯ ಹುಡುಗ. ಒಂದು ದಿನ ಶಾಲೆಯಿಂದ ಬಂದವನೇ ಬ್ಯಾಗ್ ಇಳಿಸಿ ಸಪ್ಪಗೆ ಕುಳಿತಿದ್ದ. ಅವನ ಅಜ್ಜ 'ಯಾಕೋ ಆಕಾಶ್ ಸಪ್ಪಗೆ ಕುಳಿತಿದ್ದೀಯಾ. ಕೈಕಾಲು ತೊಳೆದು ತಿಂಡಿ ತಿನ್ನಬಾರದಾ...' ಅಂದರು.

'ಹೋಗಜ್ಜಾ ನನಗೆ ಮೂಡ್ ಇಲ್ಲ' ಅಂದ ಆಕಾಶ್. 'ಯಾವಾಗಲೂ ರಾಕೇಶನೇ ಕ್ಲಾಸಿಗೆ ಫಸ್ಟ್ ಬರ್ತಾನೆ. ನಾನು ಒಂದು ಸಲನೂ ಬಂದಿಲ್ಲ' ಅಂತ ಅಳುವ ಸ್ವರದಲ್ಲೇ ಹೇಳಿದ.

'ಓಹೋ... ಹೀಗಾ ವಿಷಯ' ಅಂತ ಅವನ ಅಜ್ಜ ಆಕಾಶ್‌ನ ಅಂಕಪಟ್ಟಿ ನೋಡಿದರು. ಅಂಕಗಳು ಚೆನ್ನಾಗಿಯೇ ಬಂದಿದ್ದವು. ಆಕಾಶ್ ಕ್ಲಾಸಿಗೆ ಮೂರನೆಯ ರ್‍ಯಾಂಕ್ ಬಂದಿದ್ದ. ಆಕಾಶ್‌ನನ್ನು ಸಮಾಧಾನಪಡಿಸುವುದು ಹೇಗೆಂದು ಅಜ್ಜ ಯೋಚಿಸುತ್ತಾ 'ದುಃಖಪಡುವ ಅಗತ್ಯ ಏನೂ ಇಲ್ಲ. ಮೂರನೆಯ ರ್‍ಯಾಂಕ್ ಕಡಿಮೆಯೇನಲ್ಲ. ಕ್ಲಾಸಿಗೆ ಮೊದಲಿಗರಾಗಿ ಬಂದವರೆಲ್ಲ ಎಲ್ಲಾ ವಿಷಯಗಳಲ್ಲಿ ಜಾಣರಾಗಿರುವುದಿಲ್ಲ. ಕಡಿಮೆ ಅಂಕ ಗಳಿಸಿದವರೂ ಬೇರೆ ಯಾವುದಾದರು ವಿಷಯದಲ್ಲಿ ಬುದ್ಧಿವಂತರಿರುತ್ತಾರೆ' ಎಂದು ತಿಳಿಸಿ ಹೇಳಿದರು. ಅಲ್ಲದೆ 'ನಿರಾಶನಾಗದೆ ಮುಂದೆ ಇನ್ನೂ ಚೆನ್ನಾಗಿ ಓದಿ ಹೆಚ್ಚಿನ ಅಂಕ ಗಳಿಸಲು ಪ್ರಯತ್ನ ಪಡಬಹುದು' ಎಂದು ಹೇಳಿ ತಿಂಡಿ ತಿನ್ನುವಂತೆ ಮಾಡಿದರು.

ತಿಂಡಿ ತಿಂದಾದ ಬಳಿಕ ಆಕಾಶ್ ಮನೆ ಪಾಠ ಬರೆಯಲು ಕೂತಾಗ ಅಜ್ಜ ಅವನ ಡ್ರಾಯಿಂಗ್ ಪುಸ್ತಕ ನೋಡಿದರು. ಅವನು ಚಿತ್ರಗಳನ್ನು ಚೆನ್ನಾಗಿ ಬಿಡಿಸಿದ್ದ. 'ನೀನು ಚಿತ್ರಗಳನ್ನು ತುಂಬ ಚೆನ್ನಾಗಿ ಬರೆಯುತ್ತಿಯಲ್ಲೋ. ನಿನಗೆ ಸಂಜೆಯ ಹೊತ್ತಿಗೆ ಡ್ರಾಯಿಂಗ್ ಕ್ಲಾಸಿಗೆ ಸೇರಿಸಲಾ?' ಎಂದು ಕೇಳಿದರು. ಆಕಾಶ್ ಉತ್ಸಾಹದಿಂದ 'ಆಯ್ತು ಅಜ್ಜ. ನನಗೆ ಚಿತ್ರ ಬರೆಯುವುದೆಂದರೆ ತುಂಬ ಇಷ್ಟ' ಅಂದ.

ಅಜ್ಜ ಅವನನ್ನು ಡ್ರಾಯಿಂಗ್ ಕ್ಲಾಸಿಗೆ ಸೇರಿಸಿದರು. ವಾರದಲ್ಲಿ ಎರಡು ದಿನ ಶಾಲೆಯಿಂದ ಬಂದ ಬಳಿಕ ಆಕಾಶನು ಡ್ರಾಯಿಂಗ್ ಕ್ಲಾಸಿಗೆ ಹೋಗುತ್ತಿದ್ದ. ಅಜ್ಜ ಅವನಿಗೆ ಒಂದಷ್ಟು ಬಿಳಿಯ ಡ್ರಾಯಿಂಗ್ ಹಾಳೆಗಳನ್ನು, ಬಣ್ಣಗಳನ್ನು ತಂದು ಕೊಟ್ಟಿದ್ದರು. ಶಾಲೆಯ ಕೆಲಸ, ಸಂಜೆಯ ಆಟಪಾಠಗಳ ಬಳಿಕ ಆಕಾಶನು ಬಗೆಬಗೆಯ ಚಿತ್ರಗಳನ್ನು ಬರೆದು ಮನೆಯಲ್ಲಿ ಶಹಬ್ಬಾಸ್‌ಗಿರಿ ಪಡೆದ. ಜೊತೆಗೆ ಕಲಿಕೆಯಲ್ಲೂ ಮುಂದೆ ಇದ್ದ. ಒಂದು ದಿನ ಡ್ರಾಯಿಂಗ್ ಸ್ಪರ್ಧೆಯಲ್ಲಿ ಆಕಾಶ್‌ಗೆ ಮೊದಲ ಬಹುಮಾನ ಬಂತು. 'ಅಜ್ಜಾ, ನಾನು ಡ್ರಾಯಿಂಗ್‌ನಲ್ಲಿ ಫಸ್ಟ್' ಎಂದು ಮನೆಗೆ ಬಂದು ಅವನು ಹೇಳಿದಾಗ 'ನೋಡಿದಿಯಾ... ಎಲ್ಲ ಮಕ್ಕಳಲ್ಲೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಕೆಲವರು ಓದಿನಲ್ಲಿ ಮುಂದಿರುತ್ತಾರೆ. ಇನ್ನು ಕೆಲವರು ಸಂಗೀತ, ನೃತ್ಯ, ಕ್ರೀಡೆ ಹೀಗೆ ಯಾವುದರಲ್ಲಾದರೂ ಜಾಣರಿರುತ್ತಾರೆ. ನಿನ್ನ ಅಪ್ಪ ಅಮ್ಮ ನಿನಗೆ ಚೆನ್ನಾಗಿ ಓದುವಂತೆ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಹೇಳುತ್ತಾರೆ ವಿನಃ ನೀನೇ ಕ್ಲಾಸಿಗೆ ಫಸ್ಟ್ ಬರಬೇಕೆಂದು ಯಾವತ್ತೂ ಸತಾಯಿಸಿಲ್ಲ. ಅಲ್ಲದೆ ಒಂದು ತರಗತಿಯಲ್ಲಿ ಎಲ್ಲರಿಗೂ ಮೊದಲ ರ್‍ಯಾಂಕ್ ಬರಲು ಆಗುವುದಿಲ್ಲ ತಾನೇ? ಶಾಲಾ ತರಗತಿಯಾಗಲಿ, ಇತರ ಯಾವುದೇ ವಿಷಯದಲ್ಲಾಗಲಿ ಪ್ರಥಮ ರ್‍ಯಾಂಕ್ ಬರುವುದೇ ಮುಖ್ಯವಲ್ಲ. ಕಲಿತು ಬುದ್ಧಿವಂತನಾಗುವುದು ಮತ್ತು ಒಳ್ಳೆಯ ರೀತಿಯಲ್ಲಿ ಜೀವನ ಮಾಡುವುದು ಮುಖ್ಯ' ಎಂದು ಅಜ್ಜ ತಿಳಿಸಿ ಹೇಳಿದರು.

ಮುಂದೆ ಆಕಾಶನು ಓದು ಮುಗಿಸಿ ನೌಕರಿ ಹಿಡಿಯುವ ಹೊತ್ತಿಗೆ ದೊಡ್ಡ ಚಿತ್ರ ಕಲಾವಿದನಾಗಿ ರೂಪುಗೊಂಡನು. ■

## ಕುಂಚ ಪ್ರಪಂಚ





**ಪುನರ್ವಿ ಎನ್.**
ಯುಕೆಜಿ,
ಡೆಮೊಸ್ಟ್ರೇಷನ್
ಮಲ್ಟಿಪರ್ಪಸ್
ಸ್ಕೂಲ್,
ಮೈಸೂರು



**ಹರಿ ಸುಂದರ್ ಕೌಶಿಕ್**
7ನೇ ತರಗತಿ,
ಜ್ಞಾನಜ್ಯೋತಿ ಶಾಲೆ,
ಯಲಹಂಕ ನ್ಯೂ ಟೌನ್

